ದ.ಕನ್ನಡಜಿಲ್ಲೆಯ ಸುರತ್ಕಲ್ ಕ್ಷೇತ್ರದಲ್ಲಿ ಹೊಸ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು

1056 (1594)

ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್)

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಹೊಸದಾಗಿ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ

ಆ) ಪೆರ್ಮುಡೆ ಕರಾಂಬಾರು ಎಂಬ ಸ್ಥಳಗಳಲ್ಲಿ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಬೇಕೆಂಬ ಬೇಡಿಕೆ ಸರ್ಕಾರದ ಪರಿಶೀಲನೆಯಲ್ಲಿದೆಯೇ

ಇ) ಹಾಗಿದ್ದಲ್ಲಿ ಅವುಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು

ಈ) ಮೂಡು ಶೆಡ್ಡೆಯಲ್ಲಿ ಕಟ್ಟಡ ಜಮೀನು ಸೌಕರ್ಯ ಇದ್ದು 25 ಹಾಸಿಗೆಗಳ ಆಯುರ್ವೇದ ಆಸ್ಪತ್ರೆಯನ್ನು ಆರಂಭಿಸಬೇಕೆಂಬ ಬೇಡಿಕೆ ಸ್ಥಳೀಯರಿಂದ ಬಂದಿದೆಯೇ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು ?

ಡಾ ಹೆಚ್.ಸಿ ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಹೌದು

ಉ) ಪ್ರಸ್ತುತ ನಿಯಮಗಳ ಅನುಸಾರ 25 ಹಾಸಿಗೆಗಳ ಆಸ್ಪತ್ರೆಯನ್ನು ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ತೆರೆಯಲು ಅವಕಾಶ ಇದೆ. ಆದ್ದರಿಂದ ಮೂಡುಶೆಡ್ಡೆ ಗ್ರಾಮದಲ್ಲಿ 25ಹಾಸಿಗೆಗಳ ಆಯುರ್ವೇದಿಕೆ ಆಸ್ಪತ್ರೆಯನ್ನು ತೆರೆಯುವ ಪ್ರಶ್ನೆ ಉದ್ಭವಿಸುವುದಿಲ್ಲ

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಮತ್ತು ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

3. ಕಾರ್ಯದರ್ಶಿಯವರ ವರದಿ

ಶ್ರೀ ಯೂಕೂಬ್ ಪರೀಫ್ : (ಕಾರ್ಯದರ್ಶಿ ವಿಧಾನಸಭೆ) :-ಮಾನ್ಯಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಒಪ್ಪಿಸಿದ ವರದಿಯ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆಯನ್ನು ಪಡೆದಿರತಕ್ಕ ಈ ಕೆಳಕಂಡ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
೧	೨	೩	೪

೧. ಕರ್ನಾಟಕ ಪಂಚಾಯತ್ ರಾಜ್(ತಿದ್ದುಪಡಿ) ವಿಧೇಯಕ, ೧೯೯೯ — ೨೪-೧೧-೧೯೯೯ — ರಾಜ್ಯಪಾಲರು

೨. ತುಂಗಭದ್ರ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಅರ್ಜನೆ ಮತ್ತು ವರ್ಗಾವಣೆ) ವಿಧೇಯಕ ೧೯೯೯ — ೧೫-೦೧-೧೯೯೯ — ರಾಷ್ಟ್ರಪತಿಗಳು

೩. ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ಭತ್ಯೆಗಳ (ತಿದ್ದುಪಡಿ) ವಿಧೇಯಕ, ೧೯೯೯ — ೧೫-೦೪-೧೯೯೯ — ರಾಜ್ಯಪಾಲರು

ಅಧ್ಯಕ್ಷರು :- ಕಾರ್ಯದರ್ಶಿರವರ ವರದಿಯನ್ನು ಸದನದ ಮುಂದೆ ಮಂಡಿಸಲಾಯಿತು

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಪಿ. ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಸಚಿವರು)

I ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ)ಅವರ ಪರವಾಗಿ

1956ರ ಕರ್ನಾಟಕ ಸಚಿವರುಗಳ ವೇತನ ಮತ್ತು ಭತ್ಯೆಗಳ ಅಧಿನಿಯಮದ ನಿಯಮ 12 (2ಎ) (ಬಿ) ಮೇರೆಗೆ :

(1) ರಾಜ್ಯದ ವಸತಿ ಸಚಿವರಾದ ಶ್ರೀ ಹೆಚ್.ಡಿ. ರೇವಣ್ಣ ಇವರು ಬ್ಯಾಂಕಾಕ್, ಸಿಂಗಾಪುರ್, ನ್ಯೂಜಿಲೆಂಡ್ ಮತ್ತು ಕೌಲಾಲಂಪುರ ದೇಶಗಳಿಗೆ 28-05-1998ರಿಂದ 10-06-1999ರವರೆಗೆ ಪ್ರವಾಸ ಕೈಗೊಳ್ಳಲು ಮಂಜೂರಾತಿ ನೀಡಿ 27-05-1999ರಂದು ಹೊರಡಿಸಿದ ಡಿಪಿಎಆರ್:129:ಜಿಎಎಮ್: 98ನೇ ಸಂಖ್ಯೆಯ ಆದೇಶ,

(2) ರಾಜ್ಯದ ನೀರಾವರಿ ಸಚಿವರಾದ ಶ್ರೀ ಕೆ. ನಾಗೇಗೌಡ ಇವರು ಸ್ಕಾಟ್‌ಲ್ಯಾಂಡ್, ಇಂಗ್ಲೆಂಡ್ ಇಲ್ಲಿ ಜರುಗಿದ ಅಂತರಾಷ್ಟ್ರೀಯ ಜಲಕಾಯಿದೆ ಮತ್ತು ನೀತಿಯ ಬಗೆಗಿನ ಸಮ್ಮೇಳನದಲ್ಲಿ 06-06-1999ರಿಂದ 09-06-1999ರವರೆಗೆ ಪಾಲ್ಗೊಳ್ಳಲು ಮಂಜೂರಾತಿ ನೀಡಿ 02-06-1999ರಂದು ಹೊರಡಿಸಿದ ಡಿಪಿಎಆರ್: 57:ಜಿಎಎಮ್:99ನೇ ಸಂಖ್ಯೆಯ ಆದೇಶ

(3) ರಾಜ್ಯದ ಸಾರಿಗೆ ಸಚಿವರಾದ ಶ್ರೀ ಬಿ.ಎನ್ ಬಚ್ಚೇಗೌಡ, ಇವರು ಬ್ರೆಜಿಲ್ ಮತ್ತು ಸ್ವೀಡನ್ ದೇಶಗಳಿಗೆ 08--06-1999ರಿಂದ 2ವಾರಗಳ ಕಾಲ ಭೇಟಿ ನೀಡಲು ಮಂಜೂರಾತಿ ನೀಡಿ 07-06-1999ರಂದು ಹೊರಡಿಸಿದ ಡಿಪಿಎಆರ್:56:ಜಿಎಎಮ್:99ನೇ ಸಂಖ್ಯೆಯ ಆದೇಶಗಳನ್ನು ಮಂಡಿಸುತ್ತೇನೆ.

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ ಅನುಚ್ಛೇದ 8ರ ಮೇರೆಗೆ :

(4) ಕರ್ನಾಟಕ ಲೋಕೋಪಯೋಗಿ (ನೀರಾವರಿ ಸೇವೆಗಳು) (ಸಹಾಯಕ ಅಭಿಯಂತರರು) (ಕಿರಿಯ ಅಭಿಯಂತರರುಗಳ ನೇಮಕಾತಿ) (ವಿಶೇಷ)ನಿಯಮಾವಳಿಗಳು 1998ನ್ನು ರಚನೆ ಮಾಡುವ ಸಂಬಂಧದಲ್ಲಿ ದಿನಾಂಕ : 14-01-1999ರಂದು ಹೊರಡಿಸಿದ ಡಿಪಿಎಆರ್:48 : ಎನ್‌ಆರ್‌ಡಿ : 97ನೇ ಸಂಖ್ಯೆಯ ಅಧಿಸೂಚನೆ,

(5) ಕರ್ನಾಟಕ ನಾಗರೀಕ ಸೇವೆಗಳ (ಅನುಕಂಪದ ಆಧಾರದ ನೇಮಕಾತಿ) (ತಿದ್ದುಪಡಿ)ನಿಯಮಾವಳಿಗಳು 1998ನ್ನು ರಚಿಸುವ ಸಂಬಂಧದಲ್ಲಿ 31-3-1999ರಂದು ಹೊರಡಿಸಿದ ಡಿಪಿಎಆರ್: 11 :ಎಸ್‌ಸಿಎ: 97ನೇ ಸಂಖ್ಯೆಯ ಅಧಿಸೂಚನೆ,

(6) ಕರ್ನಾಟಕ ಅಬಕಾರಿ ಸೇವೆಗಳ(ನೇಮಕಾತಿ) (ತಿದ್ದುಪಡಿ)ನಿಯಮಗಳು 1998ನ್ನು ರಚಿಸುವ ಸಂಬಂಧದಲ್ಲಿ 09-03-1999ರಂದು ಹೊರಡಿಸಿದ ಡಿಪಿಎಆರ್ :61 ಎಸ್‌ಆರ್‌ಡಿ : 98ನೇ ಸಂಖ್ಯೆಯ ಅಧಿಸೂಚನೆ,

(7) ಕರ್ನಾಟಕ ಸರ್ಕಾರದ ಸಚಿವಾಲಯದ (ನೇಮಕಾತಿ)(2ನೇ ತಿದ್ದುಪಡಿ)ನಿಯಮಗಳು 1997ರಚಿಸುವ ಸಂಬಂಧದಲ್ಲಿ 24-02-1999ರಂದು ಹೊರಡಿಸಿದ ಡಿಪಿಎಆರ್: 61:ಎಸ್‌ಆರ್‌ಡಿ: 97 (1)ಸಂಖ್ಯೆಯ ಅಧಿಸೂಚನೆ,